**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1300/2021**

ಪಿ.ಡಬ್ಲ್ಯೂ: 3

ಸಿ.ಡಬ್ಲ್ಯೂ: 7

ಸಾಕ್ಷಿದಾರರ ಹೆಸರು : ಸೌಂದರ್ಯ

ತಂದೆಯ ಹೆಸರು: :ಮಹಂತೇಶ

ವಯಸ್ಸು : **25 ವರ್ಷ**

ಉದ್ಯೋಗ : ವಿದ್ಯಾರ್ಥಿನಿ

ವಾಸಸ್ಥಳ : ನವಿಲೆಹಾಳ್ ಚೆನ್ನಗಿರಿ ತಾಲ್ಲೂಕು

**ದಿನಾಂಕ: 16-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಚಾಸಾ-1 ನನ್ನ ಅಕ್ಕ . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ನನ್ನ ಅಕ್ಕನ ಗಂಡ ಹಾಗೂ ಅತ್ತೆ ಆಗಿರುತ್ತಾರೆ. ಈಗ್ಗೆ ಸುಮಾರು 4 ರಿಂದ 5 ವರ್ಷಗಳ ಹಿಂದೆ ಲಕ್ಕವಳ್ಳಿಯಲ್ಲಿ ನಮ್ಮ ಭಾವನವರ ಮನೆಯಲ್ಲಿ ಆರೋಪಿತರು ಚಾಸಾ1 ರವರು ಒಂದು ದಿನ ತಡವಾಗಿ ತನ್ನ ತವರು ಮನೆಯಿಂದ ಬಂದ ಕಾರಣ ಚಾಸಾ-1 ಹಾಗೂ ನನ್ನ ಹಾಗೂ ನನ್ನ ತಾಯಿಯ ಮೇಲೆ ಜಗಳ ಮಾಡಿರುತ್ತಾರೆ. ಆರೋಪಿತರು ನನ್ನ ಅಕ್ಕನಾದ ಚಾಸಾ-1 ರವರಿಗೆ ಹೊಟ್ಟೆಗೆ ಹೊಡೆದು ಬಲಗೈನ ತೋರುಬೆರಳನ್ನು ಮುರಿದು ಹಲ್ಲೆ ಮಾಡಿರುತ್ತಾರೆ. ನನ್ನ ಅಕ್ಕ ಆ ಸಂದರ್ಭದಲ್ಲಿ 6 ತಿಂಗಳ ಗರ್ಭಿಣಿ ಆಗಿದ್ದು, ಆರೋಪಿತರು ಹಲ್ಲೆ ಮಾಡಿದ್ದಕ್ಕೆ ಅವಳಿಗೆ ಸ್ಥಳದಲ್ಲೇ ಗರ್ಭಪಾತವಾಗಿರುತ್ತದೆ. ನಮ್ಮ ಅಕ್ಕನನ್ನು ನಮ್ಮ ಊರಿಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿ ನೋಡಿಕೊಂಡಿರುತ್ತೇವೆ. ಆರೋಪಿತರು ನನ್ನ ಅಕ್ಕನನ್ನು ಮನೆಗೆ ಸೇರಿಸಿಕೊಂಡಿರುವುದಿಲ್ಲ. ಆರೋಪಿತರು ವರದಕ್ಷಿಣೆ ನೀಡಬೇಕೆಂದು ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದರು. ಪ್ರತಿದಿನ ನನ್ನ ಅಕ್ಕನಿಗೆ ಕಿರುಕುಳ ನೀಡಿ ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕ ಹಾಗೂ ದೈಹಿಕ ನೋವನ್ನು ನೀಡಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.**

ನನ್ನ ಅಕ್ಕನನ್ನು 1ನೇ ಆರೋಪಿಗೆ ಕೊಟ್ಟು ಮದುವೆ ಮಾಡಿ 7 ವರ್ಷಗಳಾಗಿರುತ್ತದೆ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಹೆಣ್ಣು ಮಕ್ಕಳಿದ್ದು, ಒಂದು ಗಂಡು ಮಗುವಿರುತ್ತದೆ. ನನ್ನ ತಂದೆ ತೀರಿ ಹೋಗಿ 8 ವರ್ಷಗಳ ಕಾಲ ಆಗಿರುತ್ತದೆ. ನನ್ನ ಅಕ್ಕನ ಮದುವೆಗೂ ಮುಂಚೆ ನನ್ನ ತಂದೆ ತೀರಿಹೋಗಿರುತ್ತಾರೆ. ಆದ್ದರಿಂದ ನಮ್ಮ ಮನೆಯಲ್ಲಿ ದುಡಿಮೆ ಮಾಡುವ ಗಂಡಸರು ಯಾರೂ ಇರಲಿಲ್ಲ ಎಂದರೆ ಸರಿ. ಪ್ರಸ್ತುತ ನನ್ನ ಅಕ್ಕ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ಕೋವಿಡ್ ಸಮಯ ಇದ್ದು ಚಾಸಾ-1 ತಡವಾಗಿ ಆರೋಪಿ ಮನೆಗೆ ಬಂದ ಕಾರಣ ಕೋಪಗೊಂಡು ಜಗಳವಾಗಿ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ ಅದರಿಂದ ಗರ್ಭಪಾತವಾಗಿರುತ್ತದೆ ಎಂದು ನಿಮ್ಮ ದೂರಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಘಟನೆ ನಡೆದ ದಿನಾಂಕ, ವಾರ ನನಗೆ ನೆನಪಿಲ್ಲ. ಆರೋಪಿಯು ನಿಮ್ಮ ಮನೆಗೆ ಬಂದು ನಿಮ್ಮ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಂಡು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು, ಅವರಿಗೆ ತೊಂದರೆ ಆದ ಕಾರಣ ನಿಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದು ಅವರ ಮೇಲೆ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. ನನ್ನ ಅಕ್ಕ ನಮ್ಮ ಮನೆಗೆ ಮುಂಚೆ ಬರುತ್ತಿದ್ದರು, ಈಗ ಆರೋಪಿತರು ಕಳುಹಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಅಕ್ಕ ಮತ್ತು 1ನೇ ಆರೋಪಿ ಚೆನ್ನಾಗಿ ಜೀವನ ಮಾಡುತ್ತಿದ್ದ, ಅವರಿಗೆ ಇಬ್ಬರು ಮಕ್ಕಳು ಸಹ ಇದ್ದು, ಯಾವುದೇ ತೊಂದರೆ ಆಗಿರುವುದಿಲ್ಲ, ಆರೋಪಿತರ ಮೇಲೆ ಸುಳ್ಳುಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ .

**ಮರುವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**